## ಗದಗಿನ ಬಸವೇಶ್ವರ

116.7 ಅಡಿ ಎತ್ತರವಿರುವ ಬಸವೇಶ್ವರ ಪ್ರತಿಮೆಯ ಪಾದವೇ ಒಬ್ಬ ಮನುಷ್ಯನ ಅಳತೆಗಿಂತ ಹೆಚ್ಚಿನದು. 103 ಎಕರೆ ಪ್ರದೇಶದ ಮಧ್ಯದಲ್ಲಿ 7.64 ಕೋಟಿ ವೆಚ್ಚದಲ್ಲಿ ಗದಗಿನ ಭೀಷ್ಮ ಕೆರೆ ಹತ್ತಿರ ಈ ಮೂರ್ತಿಯನ್ನು ರಾಜ್ಯ ಸರ್ಕಾರ ನಿರ್ಮಿಸಿದೆ. 2009 ರಲ್ಲಿ ಪ್ರಾರಂಭಗೊಂಡ ಕಾರ್ಯ 2015 ರಲ್ಲಿ ಪೂರ್ತಿಗೊಂಡಿತು. ಕೆಳಗಡೆ ವಸ್ತು ಸಂಗ್ರಹಾಲಯ ನಿರ್ಮಿಸಲಾಗಿದೆ.

ಬಸವಣ್ಣನವರ ಜೀವನಾದರ್ಶ ಸಾರುವ ವಚನಗಳು, ಬಸವಣ್ಣನವರ ವಿವಿಧ ಮೂರ್ತಿಗಳು, ಜೀವನದ ಸಂದೇಶ ಸಾರುವ ಅನೇಕ ವಿಷಯಗಳು ಇಲ್ಲಿವೆ. ಕೈಯಲ್ಲಿ ವಚನಾಮೃತ ಹಿಡಿದು, ಇನ್ನೊಂದು ಕೈಯಲ್ಲಿ ವಿಶ್ವಕ್ಕೆ ಹಿತವಚನ ಸಾರುವಂತಿದೆ. ಮೂರ್ತಿಯನ್ನು ಸಿಮೆಂಟಿನಿಂದ ನಿರ್ಮಿಸಿದರೂ ಕಂಚಿನ ಪುತ್ಥಳಿಯಂತೆ ವರ್ಣ ಲೇಪಿಸಿದ್ದಾರೆ.

**ಚಿತ- ಬರಹ: ಗಣಪತಿ ಕಂಚಿಪಾಲ, ಯಲ್ಲಾಪುರ**





## ಒಂಟಿ ಕೋಡಿನ ಗೂಳಿ

ಇತ್ತೀಚೆಗೆ ಗುಜರಾತ್ ರಾಜ್ಯದ ಬಾಠಿಯಾವಾಡ್ ಪ್ರದೇಶದ ಜುನಾಗಢ್‌ಗೆ ತೆರಳಿದ್ದ ನಮ್ಮ ಸ್ನೇಹಿತರ ಕಣ್ಣಿಗೆ ಈ ಒಂಟಿ ಕೋಡಿನ ಗೂಳಿಯು ಬಿದ್ದಿತು. ಒಂದೇ ಕೋಡು ಇದ್ದರೂ ಈ ಗೂಳಿಗೆ ತನ್ನ ರಕ್ಷಣೆಗೆ ಯಾವುದೇ ಸಮಸ್ಯೆಯಿಲ್ಲ. ಕೆಲವು ಪ್ರಾಣಿಗಳಲ್ಲಿ ಈ ಸಮಸ್ಯೆ ಇದ್ದರೂ ಇದೊಂದು ಸೃಷ್ಟಿ ವೈಚಿತ್ರ್ಯವಷ್ಟೆ. ಯಾವುದೇ ದೈವಿಕ ಶಕ್ತಿ ಕಾರಣವಲ್ಲ.

**-ಡಾ. ಕೆ. ವಿ. ಸಂತೋಷ, ಹೊಳಲ್ಕೆರೆ**

## ಮರಳಲ್ಲಿ ಶೋಭಿಸಿದ ಗಜಾನನ

ಮರಳು ಕಟ್ಟಡ ಕಾರ್ಯಗಳಿಗೆ ಸೀಮಿತವಾಗದೇ, ಚಿತ್ರಕಲೆಯಲ್ಲಿಯೂ ಅರಳ ಬಲ್ಲದು. ಹಿರೇಹಡಗಲಿ ಗ್ರಾಮದ ಬಾಣದಕೃಷ್ಣಪ್ಪ ಎಂಬುವವರು ಗಜಾನನ ಚಿತ್ರವನ್ನು ಮರಳಲ್ಲಿ ಬಹು ಅಂದವಾಗಿ ಚಿತ್ರಿಸಿದ್ದಾರೆ. ಇಂತಹ ಅನೇಕ ದೇವರ ಚಿತ್ರಪಟಗಳನ್ನು ಮರಳಲ್ಲಿ ರಚಿಸಿ ಮದುವೆ ಸಮಾರಂಭಗಳಿಗೆ ಕೊಡುತ್ತಾರೆ.

**ಚಿತ್ರ- ಬರಹ: ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ**

